ಬಾಲ್ಯದಲ್ಲಿ ನಮ್ಮ ವಾಸ್ತವ ಮತ್ತು ಕಲ್ಪನಾ ಜಗತ್ತು ವಿಸ್ತರಿಸಿಕೊಳ್ಳುತ್ತಿದ್ದುದು ಕಥನಗಳ ಮೂಲಕ. ಕತೆಗಳನ್ನು ಕೇಳುತ್ತಾ ನಾವು ಅವುಗಳ ಮೂಲಕ ನಮ್ಮ ಬದುಕು, ಸಮಾಜ ಕುರಿತ ಚಿಂತನಾಕ್ರಮ ರೂಪುಗೊಳ್ಳುತ್ತಿದ್ದವು. ಇವು ನಮ್ಮ ಕಲ್ಪನಾಜಗತ್ತನ್ನು ವಿಸ್ತರಿಸುವುದರ ಜೊತೆಗೆ ಬದುಕಿನ ಕುರಿತಾದ ದೃಷ್ಟಿಕೋನವನ್ನು ರೂಪಿಸುತ್ತಿದ್ದವು, ಉದಾರವಾದಿ ಮೌಲ್ಯಗಳನ್ನು ನಮ್ಮಲ್ಲಿ ಬಿತ್ತುತ್ತಿರುವಂತೆ ಕಂಡರೂ ಅದರೊಳಗೆ ನಮಗೆ ಅರಿವಾಗದಂತೆ ತಾಕುವ ಇನ್ನೊಂದು ಮಗ್ಗಲೂ ಇತ್ತು. ಈ ಕಥನಗಳ ಇನ್ನೊಂದು ಮಗ್ಗಲನ್ನು ನಾವು ಇಂದು ವಿಶ್ಲೇಷಣೆಗೊಳಪಡಿಸುತ್ತಿದ್ದೇವೆ, ಪರ್ಯಾಯ ಕಥನಗಳನ್ನು ಅರಸುತ್ತಿದ್ದೇವೆ. ಹೀಗಾಗಿ ರಾಮನ ಕತೆ ಮಾತ್ರವಲ್ಲ, ರಾವಣನ ಕತೆಗೂ ಸ್ಪೇಸ್ ಕಲ್ಪಿಸುತ್ತಿದ್ದೇವೆ. ಶೂರ್ಪನಖಿಯ ದುಮ್ಮಾನಕ್ಕೂ ಮರುಗುತ್ತಿದ್ದೇವೆ. ಇಂತಹ ಕಥನಗಳ ಜಾಗವನ್ನು, ಮಹತ್ವವನ್ನು ಗುರುತಿಸುತ್ತಲೇ ಅವುಗಳೊಳಗಿನ ಗುಪ್ತ ಚಿಂತನಾಧಾಟಿಯನ್ನು ಒರೆಹಚ್ಚುತ್ತಿದ್ದೇವೆ. ಬಾಲ್ಯದಲ್ಲಿ ಕೇಳಿದ ಅಜ್ಜಿಕತೆಗಳಿಂದ ಹಿಡಿದು ಪುರಾಣ ಕತೆಗಳವರೆಗೆ ಅವು ಕೇವಲ ಕತೆಗಳಾಗದೇ ಬದುಕಿನ ಬಗೆಗೆ ಒಂದು ದೃಷ್ಟಿಕೋನ ರೂಪಿಸುತ್ತವೆ ಎಂಬುದನ್ನು ಗುರುತಿಸುತ್ತಾ ಸಾಗುತ್ತಿದ್ದೇವೆ.

ಇಂದು ಉದಾರವಾದಿ ಕಥನಗಳ ಜಾಗದಲ್ಲಿ ಮಾರುಕಟ್ಟೆಯ ಕಥನಗಳು ಅಣಬೆಗಳಂತೆ ತಲೆಯೆತ್ತುತ್ತಿವೆ. ಪ್ರಾಮಾಣಿಕತೆ ಎಂದರೆ ಹಮಾಮ್ ಆದರೆ, ಹೆಂಡತಿಯನ್ನು ಪ್ರೀತಿಸುವುದೆಂದರೆ ಪ್ರೆಸ್ಟೀಜ್ ಕುಕ್ಕರ್ ಕೊಡಿಸುವುದು, ಸೌಂದರ್ಯ ಎಂದರೆ ದುಬಾರಿ ಬೆಲೆಯ ಬಟ್ಟೆಗಳನ್ನು, ಒಡವೆಗಳನ್ನು ಕೊಳ್ಳುವುದು ಎಂಬ ನೆಲೆಗೆ ಮೌಲ್ಯಗಳ ಚೌಕಟ್ಟು ಬಂದುನಿಂತಿದೆ. ನಮ್ಮ ನಮ್ಮ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದೇ ಮುಖ್ಯವಾಗಿ ಕಥನಗಳನ್ನು ತಿರುಚುವುದು, ಮನಬಂದಂತೆ ಅರ್ಥೈಸಿಕೊಳ್ಳುವುದು ನಡೆದಿದೆ. ಸಾಮಾಜಿಕ ಜಾಲತಾಣಗಳು ಎಲ್ಲ ಬಗೆಯ ಅಭಿಪ್ರಾಯಗಳಿಗೂ ಮುಕ್ತ ವೇದಿಕೆ ಕಲ್ಪಿಸಿರುವುದರಿಂದ ದ್ವೇಷ, ಸಂಕುಚಿತತೆ, ಪೂರ್ವಗ್ರಹಗಳ ಕಥನಗಳು ಯಾವ ಪರಿಶೀಲನೆಗೂ ಒಳಗಾಗದೇ ಬಿತ್ತರವಾಗುತ್ತಾ, ಅವುಗಳಿಗೆ ಒಂದಷ್ಟು ಬಾಲಂಗೋಚಿಗಳು ಹುಟ್ಟಿಕೊಳ್ಳುತ್ತಾ ಎಗ್ಗಿಲ್ಲದಂತೆ ಬೆಳೆಯುತ್ತಿವೆ.

ಇಷ್ಟಾಗಿಯೂ ನಮ್ಮನ್ನು ಪೊರೆಯುವ ಕಥನಗಳು ಯಾವುವು ಎಂಬ ನೆಲೆಯಲ್ಲಿ ಚಿಂತಿಸಿದರೆ ಇಂದಿಗೂ ನನ್ನೊಳಗಿನ ಭಾಗವಾಗಿರುವ ಎರಡು ಕತೆಗಳು, ಅವುಗಳೊಳಗೆ ಹುದುಗಿಸಿಕೊಂಡಿರುವ ಮೌಲ್ಯವ್ಯವಸ್ಥೆ ನೆನಪಾಗುತ್ತದೆ. ಬಾಲ್ಯದಲ್ಲಿ ಕೇಳಿದ ಈ ಕತೆಗಳು ಇಂದಿಗೂ ನನ್ನೊಳಗೆ ಹಾಗೇ ಎಚ್ಚರದ ದನಿಯಾಗಿ ಉಳಿದಿವೆ. ಕಟ್ಟಿಗೆ ಕಡಿದು ಜೀವಿಸುವ ಮಾದ ಕಾಡಿಗೆ ಉರುವಲು ತರಲು ಹೊರಡುತ್ತಾನೆ. ಹೀಗೇ ಒಂದು ಮರದ ರೆಂಬೆ ಕಡಿಯುತ್ತಿರುವ ಸಂದರ್ಭದಲ್ಲಿ ಅವನ ಕೊಡಲಿ ಪಕ್ಕದ ಬಾವಿಗೆ ಬೀಳುತ್ತದೆ. ಜೀವನೋಪಾಯಕ್ಕಾಗಿ ಯಾವ ಆಧಾರವೂ ಇಲ್ಲದ ಆ ಮಾದ ಖಿನ್ನನಾಗಿ ಕೂರುತ್ತಾನೆ. ಆಗ ಪ್ರತ್ಯಕ್ಷಳಾದ ವನದೇವತೆ ಅವನ ದುಃಖದ ಕಾರಣವನ್ನು ಕೇಳಿ ನೆರವಾಗುವ ಭರವಸೆ ನೀಡುತ್ತಾಳೆ. ಕೊಡಲಿ ತೆಗೆದುಕೊಡುವೆನೆಂದು ಬಾವಿಗೆ ಧುಮುಕಿದ ಆಕೆ ಮೊದಲಿಗೆ ಚಿನ್ನದ ಕೊಡಲಿಯೊಂದನ್ನು ನೀಡುತ್ತಾಳೆ. 'ನನ್ನ ಕೊಡಲಿ ಇದಲ್ಲ, ನನ್ನದು ಕಬ್ಬಿಣದ ಕೊಡಲಿ' ಎಂದ ಮಾದ ಏನೇ ಹೇಳಿದರೂ ಅದನ್ನು ಪಡೆಯುವುದಿಲ್ಲ. ಮತ್ತೆ ಮುಳುಗಿದ ದೇವತೆ ಬೆಳ್ಳಿಯ ಕೊಡಲಿಯೊಂದನ್ನು ನೀಡುತ್ತಾಳೆ. ಆಗಲೂ ನನ್ನದಲ್ಲ ಎಂದು ಮಾದ ಅದನ್ನು ನಿರಾಕರಿಸುತ್ತಾನೆ. ಕೊನೆಗೆ ದೇವತೆ ಕಬ್ಬಿಣದ ಕೊಡಲಿ ತೆಗೆದುಕೊಟ್ಟಾಗ ಸಂತಸದಿಂದ ಅದನ್ನು ಸ್ವೀಕರಿಸುತ್ತಾನೆ. ಅವನ ಸತ್ಯಸಂಧತೆಗೆ ಮೆಚ್ಚಿದ ದೇವತೆ ಮೂರೂ ಕೊಡಲಿಗಳನ್ನೂ ಅವನಿಗೆ ನೀಡಿ ಹರಸುತ್ತಾಳೆ. ನನ್ನದಲ್ಲದ್ದನ್ನು ನಿರಾಕರಿಸುವ ಅವನ ಕೆಚ್ಚು ದುರಾಸೆಯ, ಸುಲಿಗೆಕೋರತನದ ಈ ಸಂದರ್ಭದಲ್ಲಿ ತಟ್ಟಿ ಎಚ್ಚರಿಸುತ್ತದೆ.